

ಸತ್ಯ ಶಾಂತಿ ತ್ಯಾಗಗಳನ್ನು ಸ್ವಾತಂತ್ರ್ಯದ ಬಣ್ಣಗಳನ್ನಾಗಿಸಿ ತಾನು ಹಿನ್ನೆಲೆಯಲ್ಲಿಯೇ ಉಳಿದ ಮಹಾತ್ಮ ಗಾಂಧಿ



ದೇಶಪ್ರೇಮದ ಬಾವುಟಕ್ಕೆ ಕೈಮಗ್ಗದ ನೂಲುಗಳ ಮುನ್ನುಡಿ



ರಾಷ್ಟ್ರಧ್ವಜಕ್ಕೆ ಇಸ್ತ್ರಿ

ಮಹಾತ್ಮಗಾಂಧಿ ಕಂಡ ಕನಸುಗಳಲ್ಲಿ ಖಾದಿ ಗ್ರಾಮೋದ್ಯೋಗವೂ ಒಂದು. ಆ ಆಶಯವನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಗರಗ ಗ್ರಾಮದಲ್ಲಿ 1957ರಲ್ಲಿ ಆರಂಭವಾದುದು 'ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ'. ಈ ಸಂಘ ಸ್ಥಾಪನೆಯ ಹಿಂದೆ ಬೆನ್ನೆಲುಬಾಗಿ ನಿಂತವರಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎ. ಪೈ, ಅನಂತ್ ಭಟ್, ಜಯದೇವ್ ರಾವ್ ಕುಲಕರ್ಣಿ, ಬಿ.ಜೆ. ಗೋಖಲೆ, ವಾಸುದೇವ್ ರಾವ್ ಹಾಗೂ ಬಿ.ಎಚ್. ಇನಾಮದಾರ ಪ್ರಮುಖರು. 2004ರಲ್ಲಿ 'ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಘಟಕದ ಆಯೋಗ'ವು ರಾಷ್ಟ್ರಧ್ವಜದ ತಯಾರಿಕೆಯ ಏಕಸ್ವಾಮ್ಯತೆಯನ್ನು ಈ ಸಂಸ್ಥೆಗೆ ನೀಡಿತು. ಇದೇ ಸಂಸ್ಥೆ 2008ರಲ್ಲಿ ಹುಬ್ಬಳ್ಳಿಗೆ ಸಮೀಪದ ಬೆಂಗೇರಿಯಲ್ಲಿ ರಾಷ್ಟ್ರಧ್ವಜ ಉತ್ಪಾದನಾ ಕೇಂದ್ರವನ್ನು ತೆರೆಯಿತು.

ಕೈಯಿಂದ ನೂಲು ತೆಗೆಯುವುದು, ಕೈಯಿಂದ ನೇಯ್ಗೆ ಮಾಡುವುದು, ಬ್ಲೀಚಿಂಗ್ ಮಾಡುವುದು, ಬಣ್ಣ ಹಾಕುವುದು, ಚಕ್ರದ ಪ್ರಿಂಟಿಂಗ್, ಹೊಲಿಯುವುದು ಹಾಗೂ ಕ್ರಮಬದ್ಧವಾಗಿ ಮಡಚುವುದು – ಈ 6 ಹಂತಗಳಲ್ಲಿ ರಾಷ್ಟ್ರಧ್ವಜ ರೂಪುಗೊಳ್ಳುತ್ತದೆ. ಇಲ್ಲಿ ಉತ್ಪಾದನೆಯಾಗುವ ತ್ರಿವರ್ಣಧ್ವಜವನ್ನು ದೆಹಲಿಯ ಕೆಂಪುಕೋಟೆಗೆ, ಸಂಸತ್ತು, ವಿಧಾನಸಭೆ, ನ್ಯಾಯಾಲಯ, ಸೇನೆ, ರಾಷ್ಟ್ರಪತಿ ಭವನ ಸೇರಿದಂತೆ ಹಲವಾರು ಪ್ರಮುಖ ಸ್ಥಳಗಳಿಗೆ ಹಾಗೂ ವಿದೇಶಗಳಲ್ಲಿರುವ ಭಾರತೀಯ ರಾಯಭಾರಿ ಕಚೇರಿಗಳಿಗೆ ರವಾನಿಸಲಾಗುತ್ತದೆ. ಈ ಎಲ್ಲ ಕೆಲಸಗಳಲ್ಲಿ ಹೆಣ್ಣುಮಕ್ಕಳು ಮುಂಚೂಣಿಯಲ್ಲಿರುವುದು ಗಮನಾರ್ಹ. ಬೆಂಗೇರಿಯಲ್ಲಿನ ಘಟಕಕ್ಕೆ ಸಂಬಂಧಿಸಿದ ಇಲ್ಲಿನ ಚಿತ್ರಗಳು ರಾಷ್ಟ್ರಧ್ವಜ ರೂಪುಗೊಳ್ಳುವುದರ ಕಥೆಯ ಜೊತೆಗೆ, ಅಲ್ಲಿನ ಸ್ವಾತಂತ್ರ್ಯ ದಿನದ ಸಂಭ್ರಮವನ್ನೂ ಸೂಚಿಸುವಂತಿವೆ.